Regd No BC 155 27-11-1969

SATYAVADI Daily, MYSORE 4 ★ 53 rd Year of Publication

ಶ್ರೀ ಸತ್ಯನಾರಾಯಣ
ಬೆನಿಫಿಟ್ ಸ್ಕೀಂ
ಚಾಮುಂಡೇಶ್ವರಿ ಟಾಕೀಸ್ ಕಟ್ಟಡ)
203, ಸಯ್ಯಾಜಿರಾವ್ ರಸ್ತೆ,
ಮೈಸೂರು-1
ಮೇಲ್ಕಂಡ ಯೋಜನೆಗೆ
ಇಂದೇ ಚಂದಾದಾರರಾಗಿರಿ
ಅದರ ಫಲವನ್ನು ಪಡೆಯಿರಿ

ಸತ್ಯವಾದಿ

Golden Jubilee Celebrated Paper

ಸ್ಥಾಪಕರು: ಅರಮನೆ ಹಿರಿಸ್ತೇದಾರ್ ಎಂ. ವಿ. ಸುಬ್ಬರಾವ್ ಸಂಪಾದಕ : ಧರ್ಮಪ್ರಚಾರನಿರತ ಎಂ. ಎಸ್. ಕೃಷ್ಣ ರಾವ್ [2 ಪೈಸೆ

ಕಾಂಗ್ರೆಸ್‌ನ ಎರಡು ಗುಂಪುಗಳಲ್ಲಿ ಉತ್ತಮ ಸಂಪರ್ಕ ಸಾಧ್ಯ

ಮಸೂದೆ ಬರುತ್ತೆ

ಒಂದು ರಾಜ್ಯದ ಲಾಟರಿ ಟಿಕೆಟ್‌ನ್ನು ಅನುಮತಿ ಇಲ್ಲದೆ ಮತ್ತೊಂದು ರಾಜ್ಯದಲ್ಲಿ ಮಾರಾಟ ಮಾಡಿದರೆ ಶಿಕ್ಷಾರ್ಹ ಅಪರಾಧವೆಂದು ಪರಿಗಣಿಸುವ ತಿದ್ದುಪಡಿ ಇಂಡಿಯನ್ ಪೀನಲ್ ಕೋಡಿಗೆ ಮಾಡಲಾಗುವುದೆಂದು ನಿನ್ನೆ ರಾಜ್ಯಸಭೆಯಲ್ಲಿ ತಿಳಿಸಲಾಯಿತು.

★

ನಿರ್ಧಾರವಿಲ್ಲ

ಸರ್ಕಾರವು ಮೈಸೂರು ಮತ್ತು ಮಹಾರಾಷ್ಟ್ರ ಗಡಿ ವ್ಯಾಜ್ಯಗಳನ್ನು ಕುರಿತು ನಿರ್ಧಾರ ತೆಗೆದುಕೊಂಡಿಲ್ಲವೆಂದು ರಾಜ್ಯಸಭೆಯಲ್ಲಿ ನಿನ್ನೆ ತಿಳಿಸಲಾಯಿತು.

○

ಪ್ರದರ್ಶನ ತೀರ್ಮಾನ

ಪ್ರಧಾನಿ ಕಾಂಗ್ರೆಸ್ ಡಿಸೆಂಬರ್ 2ರಿಂದ ಬೊಂಬಾಯಿನಲ್ಲಿ ಅಧಿವೇಶನ ನಡೆಸುವಾಗ ಮಹಾರಾಷ್ಟ್ರ ಮತ್ತು ಮೈಸೂರು ಇವುಗಳ ಗಡಿ ವಿವಾದವನ್ನು ಬೇಗ ಬಗೆ ಹರಿಸುವಂತೆ ಮಹಾರಾಷ್ಟ್ರದ ರೈತ ಹಾಗೂ ಕಾರ್ಮಿಕ ಪಕ್ಷ ಪ್ರದರ್ಶನ ಮಾಡಲಿದೆ.

○

ಆಳ್ವರ ಸೂಚನೆ

ನೀವು ಹೊಸ ಪಕ್ಷ ರಚಿಸಿಕೊಳ್ಳಿ ಇಲ್ಲವೇ ಐಕ್ಯತೆ ಮಾತುಕತೆ ನಡೆಸಲು ಒಪ್ಪಿರಿ ಎಂದು ಮೈಸೂರು ಪ್ರದೇಶ ಕಾಂಗ್ರೆಸ್ ಅಧ್ಯಕ್ಷರಾದ ಡಾ|| ನಾಗಪ್ಪ ಆಳ್ವರವರು ಬೆಂಗಳೂರಿನಲ್ಲಿ ನಿನ್ನೆ ತಿಳಿಸಿದರು.

ವಿದೇಶಿ ವಿನಿಮಯ

ಕಳೆದ ವರ್ಷ ಆಗರಬತ್ತಿ ವಿನಿಮಯದಿಂದ ಭಾರತ ರೂ. 59.41ಲಕ್ಷ ವಿದೇಶಿ ವಿನಿಮಯ ಸಂಪಾದಿಸಿದೆ.

ಸದಾಶಯ

ನವದೆಹಲಿಯಿಂದ ಬಂದ ವಾರ್ತೆಯ ಪ್ರಕಾರ, ಕಾಂಗ್ರೆಸ್‌ನ ಎರಡು ಗುಂಪುಗಳಿಗೂ ಸೇರದ ಸದಸ್ಯರು ನಿನ್ನೆ ಸಭೆ ಸೇರಿ ತಮ್ಮ ಮುಂದಿನ ಕಾರ್ಯ ಪರ್ಯಾಲೋಚಿಸಿದರು. ತಮ್ಮ ಗುಂಪುತೀಕಡೆ 50ರಷ್ಟು ಇರುವುದೆಂದು, ಎರಡು ಗುಂಪುಗಳಲ್ಲಿ ಉತ್ತಮ ಬಾಂಧವ್ಯ ತರಲು ಸಾಧ್ಯವೆಂದು ಆಶಿಸಲಾಗಿದೆ.

★

ಅಪಘಾತದಲ್ಲಿ ಸಾವು

ಬಳ್ಳಾರಿಯಿಂದ ಬಂದ ವಾರ್ತೆಯಂತೆ ನಿನ್ನೆ ಜೀಪ್ ಹಾಗೂ ಲಾರಿಗೆ ಆದ ಡಿಕ್ಕಿಯಲ್ಲಿ ಓರ್ವ ಗಂಡಸು ಮತ್ತು ಮೂವರು ಮಕ್ಕಳು ಸತ್ತರು.

★

ಸಹೋದರಿಯರ ಆತ್ಮಹತ್ಯೆ

ಪಾಲ್ಘಾಟ್‌ನಿಂದ ಬಂದಿರುವ ವಾರ್ತೆ. ಕೊಲಂಗೋಡೆಯ ವತ್ಸಲ ಎಂಬ ಹದಿನಾರು ವರ್ಷದ ಹುಡುಗಿ ಆತ್ಮಹತ್ಯೆ ಮಾಡಿಕೊಂಡಳು. ತಂಗಿಯನ್ನು ಬಿಟ್ಟಿರಲಾರದೆ ಹದಿನೆಂಟು ವರ್ಷದ ಅವಳ ಅಕ್ಕ ಸುಬ್ಬಲಕ್ಷ್ಮಿ ವಿಷಸೇವಿಸಿ ಪ್ರಾಣಬಿಟ್ಟಳು.

★

ನಾಯಕತ್ವವಿಲ್ಲ

ಸಜ್ಜಾಪುರದಲ್ಲಿ ಶ್ರೀ ಎಂ. ವಿ. ಕೃಷ್ಣರಾಯರು ಭಾಷಣ ಮಾಡುತ್ತಾ, ಇಂದು ಭಾರತದಲ್ಲಿ ಯಾವ ಮಟ್ಟದಲ್ಲೂ ನಾಯಕತ್ವವಿಲ್ಲ, ಗಾಂಧೀಜಿ ಜನತೆಯ ನಾಯಕತ್ವ ವಹಿಸಿದ ಈ ದೇಶದಲ್ಲಿ ಹೀಗಾಗಬಾರದಿತ್ತು ಎಂದರು.

○ ಖಾರಿಫ್ ಅವಧಿಯಲ್ಲಿ ಹೆಚ್ಚು ಬೆಳೆ ಬೆಳೆಯುವ ಕಾರ್ಯಕ್ರಮದಲ್ಲಿ 6.8 ಲಕ್ಷ ಎಕರೆಗಳು ಸೇರಿದ್ದವು.

ತಾ|| 28-11-69 ನೇ ಶುಕ್ರವಾರದಿಂದ
ಅಮೋಘ ಪ್ರಾರಂಭ ಪ್ರತಿದಿನ 3 ಪ್ರದರ್ಶನಗಳು:
ಒಲಂಪಿಯಾ ಚಿತ್ರಮಂದಿರದಲ್ಲಿ
ದಿನ 2-45, 6-15 ಮತ್ತು 9-45 ಕ್ಕೆ ಜಾಯ್ ಫಿಲ್ಮ್ಸ್‌ರವರ
ಅತ್ಯುತ್ತಮ ಪೌರಾಣಿಕ ಸಂಗೀತ ಭರಿತ ವರ್ಣರಂಜಿತ ಚಿತ್ರ
ಬಲರಾಮ್ ಶ್ರೀ ಕೃಷ್ಣ
(ಹಿಂದಿ)
ಪಾತ್ರ:- ಪೃಥ್ವಿರಾಜ್ ಕಪೂರ್, ದಾರಾಸಿಂಗ್, ಸಾವಿತ್ರಿ, ಜೆಮಿನಿಗಣೇಶ್,
ಆಜಾದ್ ಇನ್ನೂ ಮುಂತಾದವರು
ನಿರ್ದೇಶನ: ಚಂದ್ರಕಾಂತ್ ಸಂಗೀತ: ಸಿ ರಾಮಚಂದ್ರ

ನೀವು ಲಕ್ಷಾಧೀಶ್ವರರಾದರೂ ಆಗಬಹುದು
ಮೈಸೂರು ರಾಜ್ಯದ ಲಾಟರಿ
ಟಿಕೆಟ್ಟು ಒಂದಕ್ಕೆ ರೂ. 1-00
ಅಧಿಕೃತ ಮಾರಾಟಗಾರರು :
ಬಾಹುಸಾರ್ ಕಂಪೆನ್ಸಿ, ಓಲ್ಡ್ ಬ್ಯಾಂಕ್ ರೋಡ್, ಮೈಸೂರು

ಗ್ರಾಮಗಳು-ಉತ್ತಮಗೊಳ್ಳಲಿ

ರಂಗಿ ಗ್ರಾಮದಲ್ಲಿ ರೂ. 80 ಸಾವಿರ ಅಂದಾಜಿನ ಗ್ರಾಮ ನೀರು ಸರಬರಾಜು ಯೋಜನೆಯನ್ನು ಮುಖ್ಯ ಮಂತ್ರಿ ಶ್ರೀ ವೀರೇಂದ್ರ ಪಾಟೀಲರು ಉದ್ಘಾಟನೆ ಮಾಡುತ್ತಾ, ಗ್ರಾಮದ ಜನತೆ ಪಟ್ಟಣಗಳಿಗೆ ಹೋಗುವುದು ತಪ್ಪಬೇಕಾದರೆ ಗ್ರಾಮದ ಪರಿಸ್ಥಿತಿ ಉತ್ತಮಗೊಳ್ಳಬೇಕು ಎಂದು ತಿಳಿಸಿದರೆಂದು ಗುಲ್ಬರ್ಗಾ ವಾರ್ತೆ.

★

9 ರಾಜ್ಯಗಳಲ್ಲಿ ತೀವ್ರಗಾಮಿಗಳ ಚಟುವಟಿಕೆ ಇಹೆಯೆಂದು ರಾಜ್ಯಸಭೆಯಲ್ಲಿ ತಿಳಿಸಲಾಯಿತು.

ಬೆಲೆ ಇಳಿತ

ಶಿವಮೊಗ್ಗಾದ ಹೋಟಲುಗಳವರು ಕಾಫಿಯ ಬೆಲೆ 20 ಪೈಸೆಗಳಿಗೆ ಹೆಚ್ಚಾಗದ ರೀತಿ ಹಾಗೂ ತಿಂಡಿ ಬೆಲೆಯಲ್ಲಿ 5 ಪೈಸೆಗಳನ್ನು ಇಳಿಸಲು ನಿರ್ಧರ ಮಾಡಿರುವರು.

★

ಅಸ್ಸಾಂ ಕಾಂಗ್ರೆಸ್ ವಿಭಜನೆ ಆಗಿರುವುದಾಗಿ ವರದಿಯಾಗಿದೆ.

●

ಕಾರ್ಯಕಾರಿ ಸಮಿತಿ ರಚನೆ ಸಂಬಂಧದಲ್ಲಿ ಪ್ರಧಾನಿ ಕಾಂಗ್ರೆಸ್ಸಲ್ಲಿ ಬಿಕ್ಕಟ್ಟಾಗಿದೆ.

ಚರ್ಚಿಸಿ ಫಲವಿಲ್ಲ

ಕೋಲಾರ— ಹೇಗಾದರೂ ಕಾಂಗ್ರೆಸ್ಸಿನಲ್ಲಿ ಒಡಕುಂಟಾಗಿದೆ ; ಆಗಿಹೋದ್ದನ್ನು ಚರ್ಚಿಸಿ ಪ್ರಯೋಜನವಿಲ್ಲ ; ಈ ವಿಭಾಗ ಎಷ್ಟರಮಟ್ಟಿಗೆ ಹೆಚ್ಚಾಗಿ ಜನತಾ ಪಕ್ಷಕ್ಕೆ ಉಪಯೋಗಿಸಲ್ಪಡಬೇಕೆಂಬುದನ್ನು ನಾವು ಈಗ ನೋವು-ಈಗ ಯೋಚಿಸಬೇಕೆಂದು ಮಧ್ಯಪ್ರದೇಶದ ಗೌರ್ನರ್ ಶ್ರೀ ಕೆ ಸಿ ರೆಡ್ಡಿಯವರು, ಈಚಿನ ಕಾಂಗ್ರೆಸ್ಸಿನಲ್ಲಾದ ವಿಷಯ ಕುರಿತು ಹೇಳಿದರು.

---

1 ಲಕ್ಷ ರೂ. ನೆರವು

ಬೆಳಗಾಂ— ಬೆಳಗಾಂನಲ್ಲಿ ಜ್ಯೋತಿ ಮಹಾವಿದ್ಯಾಲಯ ನಡೆಸುತ್ತಿರುವ ದಕ್ಷಿಣ ಮಹಾರಾಷ್ಟ್ರ ಶಿಕ್ಷಣ ಮಂಡಲಿಗೆ ಮನ್ನಣೆ ಕೊಟ್ಟು ಬೆಳಗಾಂನಲ್ಲಿ ಅಲ್ಪ ಸಂಖ್ಯಾ ಭಾಷಾ ಸಮಸ್ಯೆ ಪರಿಹರಿಸಬೇಕೆಂದು ಮೈಸೂರು ಸರಕಾರವನ್ನು ಮಹಾರಾಷ್ಟ್ರ ಸರಕಾರ ಪ್ರೇರಿಸುತ್ತಿದೆ ಎಂದು ಮಹಾರಾಷ್ಟ್ರ ಶಾಸನ ಸಭೆಯಲ್ಲಿ ತಿಳಿಸಲಾಯಿತು— ಮಂಡಲಿಯು ಕಟ್ಟುವ ಕಟ್ಟಡಕ್ಕೆ ಮಹಾರಾಷ್ಟ್ರ ಸರಕಾರ ರೂ 1 ಲ ಕೊಟ್ಟಿದೆಯೆಂದೂ ತಿಳಿಸಲಾಯಿತು.

ಗೋರಕ್ಷಣೆಗೆ ಚಂದಾ ಮತ್ತು ಡೊನೇಷನ್ ಪಾವತಿಮಾಡುವ ಅಡ್ರೆಸ್

1 ಗೋರಕ್ಷಣ ಆಫೀಸ್, ಸತ್ಯವಾದಿ ಪ್ರೆಸ್ ಚಾಮರಾಜಪುರಂ, ಮೈಸೂರು.

2 ಶ್ರೀ ಬಿ ಜಿ ಶಾಸ್ತ್ರಿ, ಆಥರ್ ಮತ್ತು ಅಸ್ಸಾಲೆಜರ್, 180 ನ್ಯೂ ಬ್ಲಾಕ್, ವಿದ್ಯಾರಣ್ಯಪುರಂ, ಮೈಸೂರು.

3 ಶ್ರೀ ಆನಂತನರಸಿಂಹಯ್ಯಂಗಾರ್, ಶಾಸ್ತ್ರೋಧರ್ಮಪ್ರಚಾರಿ ಸಭಾ ಹೊಂಗನೂರು, ಚಾಮರಾಜನಗರ ತಾಲ್ಲೂ

S H A K T I

S U D H A

A Superb Tonic

ಪ್ರಮುಖ ವರ್ತಮಾನಗಳಿಗೆ ಆಕರ್ಷಣೀಯ ಲೇಖನಗಳಿಗೆ
ಧಾರ್ಮಿಕ ವಿಚಾರಗಳಿಗೆ ಸತ್ಯವಾದಿ ದಿನಪತ್ರಿಕೆಯನ್ನು ತಪ್ಪದೆ ಓದಿ
ಅದರಲ್ಲಿ ಜಾಹಿರಾತು ಪ್ರಕಟನೆ-ಲಾಭದಾಯಕ
ಸ್ಥಳದಲ್ಲಿ ಚಂದಾ ತಿಂಗಳಿಗೆ 40 ಪೈಸೆ; ಅಂಚೆವೆಚ್ಚ ಸೇರಿ ವರ್ಷಕ್ಕೆ ರೂ 10-00
ಸೋಮವಾರ ಸಂಚಿಕೆ ವರ್ಷಕ್ಕೆ ರೂ. 2

ದೇಶದ ಹಿತಕಾಗಿ
ಕುಟುಂಬ ಯೋಜನೆ

ಅಖಿಲ ಭಾರತದಲಿ ಕೂಡಲೇ
ಗೋವಧೆ ನಿಷೇಧವಾಗಲಿ

ವುಡ್‌ಲಾಂಡ್ ಜಯಪ್ರದ 2ನೇ ವಾರ
ಶಿ ನ ಅಮೋಘ ಪ್ರಾರಂಭ
— ಮನಮೋಹಕ ಹಿಂದಿ ಚಿತ್ರ — ಈಸ್ಟ್‌ಮನ್ ಕಲರ್ —

ಹ ಮ್ ಸಾ ಯ

ಪಾತ್ರ : ಮಾಲಾಸಿನ್ಹಾ, ಜಾಯ್ ಮುಖರ್ಜಿ, ಶರ್ಮಿಳಾ ಟಾಗೂರ್
ಸಂಗೀತ : ಓ. ಪಿ. ನಯ್ಯರ್
[ದಿನ 3 ಪ್ರದರ್ಶನಗಳು]

ಆಪೇರಾ— 21-11-69 ರಿಂದ
.... ಅತ್ಯಮೋಘ ತಮಿಳು ಚಿತ್ರ ....

ದೈವಮಗನ್

ಪಾತ್ರ ; ಶಿವಾಜಿ ಗಣೇಶ್, ನಾಗೇಶ್, ಜಯಲಲಿತ
ದಿನ 3 ಆಟಗಳು

Help The Gorakshana

ಗೋರಕ್ಷಣೆ ಮತ್ತು ಪ್ರಾಣಿದಯಾ ಕಾರ್ಯಗಳು ಹೆಚ್ಚಾಗಿ ನಡೆಯಲಿ
ಗೋರಕ್ಷಣೆಗೆ ಬೆಂಬಲ ನೀಡಿ

Protectthe Cow

Quality Printing — Neat Binding

Lakshminarasimha Press

Sivarampet, Mysore

Edited, Printed & Published by Dharmaprachara Nirata M. S Krishna Rao (Proprietor) at the Satyavadi Press Chamarajapuram, Mysore